# ನಗರಸಭಾ ಕಾರ್ಯಾಲಯ, ಚಿತ್ರದುರ್ಗ

ಫೋನ್ ನಂ:08194-222401, ಸಹಾಯವಾಣಿ: 08194-221588,
ಫ್ಯಾಕ್ಸ್: 08194-221790, Website: www.chitradurgacity.gov.in


ಕ್ರ.ಸಂ:ನಸಚಿ:ಆಶ್ರಯಸಿಆರ್:13:06-07, ದಿನಾಂಕ: 29-06-2009

## ವಾಣಿಜ್ಯ ನಿವೇಶನಗಳ ಬಹಿರಂಗ ಹರಾಜ್ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೆ ತಿಳಿಯಪಡಿಸುವುದೇನೆಂದರೆ, ಚಿತ್ರದುರ್ಗ ನಗರಸಭೆ ವ್ಯಾಪ್ತಿ ವಾರ್ಡ್ ನಂ. 35 ರ ಕವಾಡಿಗರಹಟ್ಟಿ ನಗರ ಆಶ್ರಯ ಬಡಾವಣೆಯ ಲೇಔಟ್ ನಂ. 01 ರಲ್ಲಿ 03 ನಿವೇಶನ ಮತ್ತು ಲೇಔಟ್ ನಂ. 02 ರಲ್ಲಿ 30 ನಿವೇಶನ, ಒಟ್ಟು 33 ವಾಣಿಜ್ಯ ನಿವೇಶನಗಳನ್ನು ಬಹಿರಂಗ ಹರಾಜು ಮೂಲಕ ವಿಲೇಪಡಿಲಾಗುವುದು. ಇಷ್ಟವುಳ್ಳವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭಡ ಸವಾಲಿನಲ್ಲಿ ಭಾಗವಹಿಸಿ ಪಡೆಯಬಹುದಾಗಿದೆ.

**ಹರಾಜಿನ ದಿನಾಂಕ:06-07-2009 ಸಮಯ : ಬೆಳಗ್ಗೆ 10.30 ರಿಂದ ಪ್ರಾರಂಭ ಸ್ಥಳ: ಕವಾಡಿಗರ ಹಟ್ಟಿ ಆಶ್ರಯ ಬಡಾವಣೆ**

### ಲೇಔಟ್ ನಂ. 01 ರಲ್ಲಿನ ನಿವೇಶನಗಳ ವಿವರ

| ಕ್ರ. ಸಂ. | ನಿವೇಶನ ಸಂಖ್ಯೆ | ನಿವೇಶನದ ಬಳಕೆ ಉದ್ದೇಶ | ಅಂದಾಜು ಅಳತೆ ಅಡಿಗಳಲ್ಲಿ | | ನಿವೇಶನ ವಿಸ್ತೀರ್ಣ ಚದರ ಅಡಿಗಳಲ್ಲಿ |
|---|---|---|---|---|---|
| | | | ಪೂರ್ವ-ಪಶ್ಚಿಮ | ಉತ್ತರ-ದಕ್ಷಿಣ | |
| 1 | ಸಿ-1 | ವಾಣೈಜ್ಯ ಸಂಕೀರ್ಣ | 100 | 40 | 4000 |
| 2 | ಸಿ-5 | ವಿಡಿಯೋ ಪಾರ್ಲರ್ | 40 | $\frac{41+39}{2}$ | 1600 |
| 3 | ಸಿ-6 | ಹೊಟೇಲ್ | 60 | $\frac{41+39}{2}$ | 2400 |
| | ಒಟ್ಟು 03 | - | - | - | 8000 |

### ಲೇಔಟ್ ನಂ. 02 ರಲ್ಲಿನ ನಿವೇಶನಗಳ ವಿವರ

| ಕ್ರ. ಸಂ. | ನಿವೇಶನ ಸಂಖ್ಯೆ | ನಿವೇಶನ ಗಳ ಪ್ರಮಾಣ | ನಿವೇಶನದ ಬಳಕೆ ಉದ್ದೇಶ | ಅಂದಾಜು ಅಳತೆ ಅಡಿಗಳಲ್ಲಿ | | ನಿವೇಶನ ವಿಸ್ತೀರ್ಣ ಚದರ ಅಡಿಗಳಲ್ಲಿ |
|---|---|---|---|---|---|---|
| | | | | ಪೂರ್ವ-ಪಶ್ಚಿಮ | ಉತ್ತರ-ದಕ್ಷಿಣ | |
| 1 | ಸಿ-1/1 | 01 | ವಾಣಿಜ್ಯ ಇತರೆ | $\frac{10.25+10}{2}$ | $\frac{17.5+20}{2}$ | 190 |
| 2 | ಸಿ-1/2 | 01 | ವಾಣಿಜ್ಯ ಇತರೆ | $\frac{10.25+10}{2}$ | $\frac{15+17.5}{2}$ | 164 |
| 3 | ಸಿ-1/3 ರಿಂದ ಸಿ-1/6 | 04 | ವಾಣಿಜ್ಯ ಇತರೆ | 20 | 10 | 800 |
| 4 | ಸಿ-1/7 ರಿಂದ 10 ಸಿ-1/13 ರಿಂದ 18 | 10 | ವಾಣಿಜ್ಯ ಇತರೆ | 15 | 10 | 1500 |
| 5 | ಸಿ-1/21,22,23 | 03 | ವಾಣಿಜ್ಯ ಇತರೆ | 15 | 09 | 405 |
| 6 | ಸಿ-1/11 | 01 | ವಾಣಿಜ್ಯ ಇತರೆ | $\frac{15+11}{2}$ | 15 | 195 |
| 7 | ಸಿ-1/12 | 01 | ವಾಣಿಜ್ಯ ಇತರೆ | $\frac{16+19}{2}$ | 15 | 262.5 |
| 8 | ಸಿ-1/19 | 01 | ವಾಣಿಜ್ಯ ಇತರೆ | $\frac{12+16}{2}$ | 15 | 210 |
| 9 | ಸಿ-1/20 | 01 | ವಾಣಿಜ್ಯ ಇತರೆ | $\frac{9+12}{2}$ | 15 | 157.5 |
| 10 | ಸಿ-2 | 01 | ಪ್ಲಂಬರ್ & ಹಾರ್ಡ್‌ವೇರ್ | 40 | 30 | 1200 |
| 11 | ಸಿ-4 | 01 | ಟೈಲರ್ ಷಾಪ್ | 20 | $\frac{20+18}{2}$ | 380 |
| 12 | ಸಿ-5 | 01 | ಡಿಪಾರ್ಟ್‌ಮೆಂಟಲ್ ಸ್ಟೋರ್ | 60 | $\frac{48+39}{2}$ | 2610 |
| 13 | ಸಿ-6 | 01 | ಮೆಡಿಕಲ್ ಸ್ಟೋರ್ಸ್ | 40 | 40 | 1600 |
| 14 | ಸಿ-7 | 01 | ಗ್ಯಾರೇಜ್ | 60 | 40 | 2400 |
| 15 | ಸಿ-8 | 01 | ಹೋಟೇಲ್ | $\frac{30+23}{2}$ | 40 | 1060 |
| 16 | ಸಿ-9 | 01 | ಗ್ಯಾಸ್ ಮಾರಾಟ ಮಳಿಗೆ | $\frac{33+30}{2}$ | 40 | 1260 |
| | ಒಟ್ಟು | 30 | - | - | | 14394 |

## –: ಹರಾಜು ಷರತ್ತುಗಳು :–

1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಪ್ರಾರಂಭಕ್ಕೆ ಮುನ್ನ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಇವರ ಹೆಸರಿನಲ್ಲಿ ರೂ. 10,000/– ಡಿ.ಡಿ.ಯನ್ನು ಠೇವಣಿ ರೂಪದಲ್ಲಿ ಹಾಜರುಪಡಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಹರಾಜು ಅಖೈರಾದ ಕೂಡಲೇ ಅಖೈರು ಬಿಡ್‌ದಾರರ ವಿನಃ ಬೇರೆಯವರ ಡಿ.ಡಿ.ಯನ್ನು ವಾಪಾಸು ಕೊಡಲಾಗುವುದು (ಚೆಕ್ ಸ್ವೀಕರಿಸುವುದಿಲ್ಲ) ಹಾಗೂ ನಿವೇಶನಗಳನ್ನು ಸಾಕಷ್ಟು ಮುಂಚಿತವಾಗಿ ನೋಡಬಹುದಾಗಿರುತ್ತದೆ.

2) ಹರಾಜಿನ ವೇಳೆಯಲ್ಲಿ ಸಾಕಷ್ಟು ಸಮಂಜಸವಾದ ಸವಾಲುದಾರರು ಭಾಗವಹಿಸದೇ ಇದ್ದಲ್ಲಿ ಅಥವಾ ಇತರೆ ಯಾವುದೇ ಕಾರಣಗಳಿಂದಾಗಲಿ ಪೂರ್ಣ ಹರಾಜನ್ನು ಮುಂದೂಡುವ ಅಧಿಕಾರವನ್ನು ಹರಾಜು ನಡೆಸುವ ಅಧಿಕಾರಿಗಳು ಅಧಿಕಾರ ಹೊಂದಿರುತ್ತಾರೆ.

3) ಹರಾಜು ನಡೆಸುವವರು ಹರಾಜಿನ ಷರತ್ತುಗಳನ್ನು ಹರಾಜಿನ ಕಾಲದಲ್ಲಿ ಮಾರ್ಪಾಡು ಮಾಡುವ ಅಧಿಕಾರ ಹೊಂದಿರುತ್ತಾರೆ.

4) ನಿವೇಶನ ಅಳತೆ ವ್ಯತ್ಯಾಸ ವಗೈರೆ ಕಂಡು ಬಂದಲ್ಲಿ ಹರಾಜು ಪ್ರಾರಂಭಿಸುವ ಮುನ್ನ ಸ್ಥಳದಲ್ಲಿಯೇ ಅಳತೆ ಮಾಡಲಾಗುತ್ತದೆ. ಆಗ ಕಂಡು ಬರುವ ಅಳತೆಯಂತೆಯೇ ಎಂದು ತಿಳಿಯತಕ್ಕದ್ದು ಹಾಗೂ ಅಂಗೀಕರಿಸತಕ್ಕದ್ದು, ಈ ವಿಚಾರದಲ್ಲಿ ಹರಾಜು ಪ್ರಾರಂಭವಾದ ನಂತರ ಅಥವಾ ಅಖೈರಾದ ನಂತರ ಯಾವುದೇ ತಕರಾರು ಅಂಗೀಕರಿಸುವುದಿಲ್ಲ.

5) ಅಖೈರು ಸವಾಲುದಾರರು ಅಖೈರಾದ ಕೂಡಲೇ ಹರಾಜು ಮೊಬಲಗಿನ ಮೂರನೇ ಒಂದು ಭಾಗದ ಹಣವನ್ನು (1/3) ಆ ದಿವಸವೇ ಪಾವತಿ ಮಾಡತಕ್ಕದ್ದು, ತಪ್ಪಿದಲ್ಲಿ ಡಿಪಾಜಿಟ್ (ಠೇವಣಿ) ಹಣವನ್ನು ನಗರಸಭೆಯ ಆಶ್ರಯ ನಿಧಿಗೆ ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜು ಮಾಡಲಾಗುವುದು.

6) ಅಖೈರು ಸವಾಲುದಾರನು ಹರಾಜು ಬಾಬ್ತಿನ ಉಳಿದ ಮೂರನೇ ಎರಡು ಭಾಗ (2/3) ಹರಾಜು ನಡೆದ ದಿನದಿಂದ 30 ದಿವಸದೊಳಗಾಗಿ ಪಾವತಿ ಮಾಡತಕ್ಕದ್ದು, ತಪ್ಪಿದಲ್ಲಿ ಕಟ್ಟಿರುವ ಮೂರನೇ ಒಂದು ಭಾಗದ ಹಣವನ್ನು ಈ ನಗರಸಭೆಯ ಆಶ್ರಯ ನಿಧಿಗೆ ಮುಟ್ಟುಗೋಲು ಹಾಕಿಕೊಂಡು ಅಂತಹ ನಿವೇಶನಗಳನ್ನು ಮರು ಹರಾಜು ಮೂಲಕ ವಿಲೇಪಡಿಸಲಾಗುತ್ತದೆ. ಮರು ಹರಾಜಿನಲ್ಲಿ ಲಾಭ ಬಂದಲ್ಲಿ ಹಿಂದಿನ ಅಖೈರು ಬಿಡ್‌ದಾರರಿಗೆ ಕೇಳುವ ಯಾವ ಹಕ್ಕು ಇರುವುದಿಲ್ಲ. ಹಾಗೂ ನಷ್ಟವಾದಲ್ಲಿ ಉಂಟಾದ ನಷ್ಟಕ್ಕೆ ಹಿಂದಿನ ಬಿಡ್‌ದಾರರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

7) ನಿವೇಶನ ಹರಾಜು ಸ್ಥಿರೀಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಒಳಪಟ್ಟಿರುತ್ತದೆ. ಅಂದರೆ, ನಗರ ಆಶ್ರಯ ಅಧ್ಯಕ್ಷರಿಗೆ ಒಳಪಟ್ಟಿರುತ್ತದೆ.

8) ನಗರಸಭೆಯಿಂದ ಸೂಚನೆ ಬಂದ 20 ದಿನದೊಳಗಾಗಿ ಅಖೈರು ಬಿಡ್‌ದಾರರು ತಮ್ಮ ಸ್ವಂತ ಖರ್ಚಿನಿಂದ ಕಾನೂನು ರೀತ್ಯಾ ನಿವೇಶನ ರಿಜಿಸ್ಟರ್ ಮಾಡಿಸಿ ಕೊಳ್ಳತಕ್ಕದ್ದು ಹಾಗೂ ಸುಪರ್ದು ಪಡೆಯತಕ್ಕದ್ದು.

9) ನಿವೇಶನ ಯಾವ ಉದ್ದೇಶಕ್ಕೆ ಮೀಸಲಿಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.

10) ಅಖೈರು ಬಿಡ್‌ದಾರರು ತಾನು ಪಡೆದ ನಿವೇಶನಕ್ಕೆ ನಗರಸಭೆಯ ಕಾಯ್ದೆ ಮೇರೆಗೆ ಕಂದಾಯವನ್ನು ಕಾಲ ಕಾಲಕ್ಕೆ ಸರಿಯಾಗಿ ಪಾವತಿಸಕ್ಕದ್ದು.

11) ಅಖೈರು ಬಿಡ್‌ದಾರರು ತಾನು ಪಡೆದ ನಿವೇಶನದಲ್ಲಿ ಮೀಸಲಿಟ್ಟ ಉದ್ದೇಶಕ್ಕೆ ನಗರಸಭೆಯಿಂದ ಪರವಾನಿಗೆ ಪಡೆದುಕೊಂಡು ಕಟ್ಟಡ ನಿರ್ಮಿಸತಕ್ಕದ್ದು.

**ವಿಶೇಷ ಸೂಚನೆ:–**
ಹೆಚ್ಚಿನ ಮಾಹಿತಿ ಮತ್ತು ನಕ್ಷೆ ವಿವರವನ್ನು ಕಚೇರಿ ವೇಳೆಯಲ್ಲಿ ಆಶ್ರಯ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

**ಲೇಔಟ್ ನಕ್ಷೆ**

**ಸಹಿ/–**
**(ಎಮ್.ಎಸ್.ಫರಾಸ್)**
**ಪೌರಾಯುಕ್ತರು,**
**ನಗರಸಭೆ, ಚಿತ್ರದುರ್ಗ.**

**ಸಹಿ/–**
**(ಅಮ್ಲಾನ್ ಆದಿತ್ಯ ಬಿಸ್ವಾಸ್)** ಭಾ.ಆ.ಸೇ.
**ಜಿಲ್ಲಾಧಿಕಾರಿಗಳು,**
**ಚಿತ್ರದುರ್ಗ**

(ಸು)